# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010

www.souharda.coop, Ph: 080-23378375-80, Email:souharda@souharda.coop


**ಪ್ರಕಟಣೆಯ ದಿನಾಂಕ: 08/09/2014**

**ಕಿರಿಯ ಅಧಿಕಾರಿಗಳು/ಸೌಹಾರ್ದ ಅಭಿವೃದ್ಧಿ ಅಧಿಕಾರಿ/ಡಿಸೈನರ್/ಶೀಘ್ರಲಿಪಿಕಾರ(ಸ್ಟೆನೋಗ್ರಾಫರ್) ಕಿರಿಯ ಸಹಾಯಕ/ವಾಹನಚಾಲಕ/ಉಪಸಿಬ್ಬಂದಿ ಹುದ್ದೆಯ ನೇಮಕಾತಿಗಾಗಿ ಅರ್ಜಿ ನಮೂನೆ.**

**ಭಾವಚಿತ್ರ (ಪಾಸ್ ಪೋರ್ಟ್ ಅಳತೆ)**

(ಭಾವಚಿತ್ರವನ್ನು ಕಡ್ಡಾಯವಾಗಿ ಲಗತ್ತಿಸಬೇಕು ಇಲ್ಲವಾದಲ್ಲಿ ಅರ್ಜಿ ತಿರಸ್ಕರಿಸಲಾಗುವುದು)

**ಹುದ್ದೆಯ ಹೆಸರು:**

| | |
|---|---|
| 1. ಅಭ್ಯರ್ಥಿಯ ಹೆಸರು: | |
| | ಲಿಂಗ: ಸ್ತ್ರೀ/ಪುರುಷ: ವಿವಾಹಿತ/ಅವಿವಾಹಿತ: .. |
| 2. ಅಂಚೆ ವಿಳಾಸ: | ಪಿನ್: ದೂರವಾಣಿ ಸಂಖ್ಯೆ:<br>ಇ–ಮೇಲ್ ವಿಳಾಸ: |
| 3. ಖಾಯಂ ವಿಳಾಸ: | |
| | ಪಿನ್: |
| 4. ತಂದೆಯ/ತಾಯಿಯ ಹೆಸರು ಮತ್ತು ಅವರ ಉದ್ಯೋಗ (ತಂದೆ/ತಾಯಿ ಜೀವಂತವಿಲ್ಲದಿದ್ದಲ್ಲಿ ಪೋಷಕರ ಹೆಸರು, ಸಂಬಂಧ ಮತ್ತು ಅವರ ಉದ್ಯೋಗ) | |
| 5. ಜನ್ಮ ದಿನಾಂಕ/ವಯಸ್ಸು(ಎಸ್ ಎಸ್ ಎಲ್ ಸಿ, ಅಂಕಪಟ್ಟಿಯಲ್ಲಿರುವಂತೆ) | ದಿನಾಂಕ ತಿಂಗಳು ವರ್ಷ ವಯಸ್ಸು |
| 6. ರಾಷ್ಟ್ರೀಯತೆ | |
| 7. «zÁåºðv | |

| ಕ್ರಮ ಸಂ | ವಿದ್ಯಾರ್ಹತೆ | ತೇರ್ಗಡೆಯಾದ ವರ್ಷ | ಪಡೆದ ಅಂಕಗಳು | % |
|---|---|---|---|---|
| 1 | ಎಸ್.ಎಸ್.ಎಲ್.ಸಿ | | | |
| 2 | ಪಿ.ಯು.ಸಿ | | | |

<table>
<tr><td rowspan="4"></td><td colspan="5">ಪದವಿ ಮತ್ತು ಸ್ನಾತಕೋರ ಪದವಿಯ ವಿವರಗಳು</td></tr>
<tr><td>1</td><td></td><td></td><td></td><td></td></tr>
<tr><td>2</td><td></td><td></td><td></td><td></td></tr>
<tr><td>3</td><td></td><td></td><td></td><td></td></tr>
<tr><td rowspan="3">8. ಅನುಭವ</td><td colspan="2">ಹುದ್ದೆಯ ಹೆಸರು</td><td>ಅನುಭವದ ಕ್ಷೇತ್ರ</td><td>ಕೆಲಸ ತೊರೆಯಲು ಕಾರಣ</td><td>ಅನುಭವದ ಅವಧಿ</td></tr>
<tr><td colspan="2"></td><td></td><td></td><td></td></tr>
<tr><td colspan="2"></td><td></td><td></td><td></td></tr>
<tr><td>9. ಪಡೆಯುತ್ತಿರುವ/ಪಡೆದ ವೇತನ/ ವೇತನ ಶ್ರೇಣಿ (ವಾರ್ಷಿಕವಾಗಿ)</td><td colspan="5"></td></tr>
<tr><td>10. ಉದ್ಯೋಗವನ್ನು ತೊರೆಯಲು ನೀಡಬೇಕಾದ ನೋಟಿಸಿನ ಅವಧಿ</td><td colspan="5"></td></tr>
<tr><td>11. ಓದಲು/ಬರೆಯಲು ಮತ್ತು ಮಾತನಾಡಲು ಬರುವ ಷೆಗಳು</td><td colspan="2">ಭಾಷೆ</td><td>ಓದಲು</td><td>ಬರೆಯಲು</td><td>ಮಾತನಾಡಲು</td></tr>
<tr><td>12. ಕಂಪ್ಯೂಟರ್ ಜ್ಞಾನದ ವಿವರ</td><td colspan="5"></td></tr>
<tr><td>13. ಡಿ.ಡಿ ಪಾವತಿ ವಿವರ</td><td colspan="5">ಡಿ.ಡಿ ಸಂಖ್ಯೆ:<br>ಬ್ಯಾಂಕ್ /ಶಾಖೆ ಹೆಸರು: ..<br>ದಿನಾಂಕ: .<br>ಡಿ.ಡಿ. ಮೊತ್ತ: ..</td></tr>
<tr><td>14. ಈ ಹಿಂದೆ ಯಾವುದಾದರು ಪ್ರಕರಣದಲ್ಲಿ ನಿರ್ಣಿತ ಅಪರಾಧಿಯಾಗಿದ್ದರೆ ವಿವರ</td><td colspan="5"></td></tr>
<tr><td>15. ನ್ಯಾಯಾಂಗದಲ್ಲಿ ಯಾವುದಾದರು ಕ್ರಿಮಿನಲ್ ಪ್ರಕರಣವು ಬಾಕಿ ಇದ್ದಲ್ಲಿ ವಿವರ</td><td colspan="5"></td></tr>
<tr><td>16. ವೃತ್ತಿ ಸಂಘ / ಪ್ರಾಧಿಕಾರವು ವೃತ್ತಿ ನಡೆಸದಂತೆ ನಿರ್ಬಂಧ ಹೇರಿದ್ದಲ್ಲಿ ಅಥವಾ ಯಾವುದೇ ಪ್ರಕರಣ ದಾಖಲಾಗಿದ್ದಲ್ಲಿ, ವಿಚಾರಣೆಯ ಹಂತದಲ್ಲಿದ್ದಲ್ಲಿ ವಿವರ</td><td colspan="5"></td></tr>
</table>

**ಘೋಷಣೆ:**

ಎಲ್ಲಾ ಮಾಹಿತಿಗಳು/ವಿವರಗಳು ನನ್ನ ತಿಳುವಳಿಕೆ ಮತ್ತು ಜ್ಞಾನದ ಮಟ್ಟಿಗೆ ಸತ್ಯವಾಗಿರುತ್ತವೆ ಎಂದು ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ಮತ್ತು ಪ್ರಾಮಾಣಿಕವಾಗಿ ದೃಢೀಕರಿಸುತ್ತೇನೆ. ಆದಾಗ್ಯೂ ಈ ಮೇಲೆ ನೀಡಿರುವ ಯಾವುದೇ ಮಾಹಿತಿ ಮತ್ತು ವಿವರಗಳು ಸುಳ್ಳು ಎಂದು ಕಂಡುಬಂದಲ್ಲಿ ಕಾನೂನಿನನ್ವಯ ಶಿಕ್ಷೆಗೆ ಗುರಿಯಾಗುತ್ತೇನೆಂದು ನಾನು ತಿಳಿದಿರುತ್ತೇನೆ ಹಾಗೂ ಕ.ರಾ.ಸೌ.ಸಂಯುಕ್ತ ಸಹಕಾರಿಯು ನಿರ್ಧರಿಸುವ ಕ್ರಮಕ್ಕೆ ಮತ್ತು ಸಂಯುಕ್ತ ಸಹಕಾರಿಯಲ್ಲಿನ ಸೇವೆಯ ಹಕ್ಕನ್ನು ಬಿಟ್ಟು ಬಿಡುವುದಕ್ಕೆ ಸಹ ನಾನು ಒಪ್ಪಿರುತ್ತೇನೆ.

ದಿನಾಂಕ:

ಸ್ಥಳ: ಅಭ್ಯರ್ಥಿಯ ಸಹಿ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.**
**ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010**
**www.souharda.coop, Ph: 080-23378375-80, Email:souharda@souharda.coop**

# ನೇಮಕಾತಿ ಸೂಚನೆಗಳು

## ಅ) ಅರ್ಜಿ ಸಲ್ಲಿಸುವ ವಿಧಾನ :

1 ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಗಳನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೆಬ್‌ಸೈಟ್ (www.souharda.coop) ನಿಂದ ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಸಂಬಂಧಪಟ್ಟ ಅರ್ಜಿ ಶುಲ್ಕದ ಡಿ.ಡಿ.ಯೊಂದಿಗೆ (ಮೇಲ್ಕಂಡ ವಿಳಾಸಕ್ಕೆ) ಸಲ್ಲಿಸತಕ್ಕದ್ದು. ಮತ್ತು soft copyಯನ್ನು ಇಮೇಲ್ (recruitment@souharda.coop) ಮಾಡತಕ್ಕದ್ದು. **ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ:10.10.2014**.

2. ಅರ್ಜಿಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ಪಾಸ್‌ಪೋರ್ಟ್ ಅಳತೆಯ ಫೋಟೋ ಅಂಟಿಸತಕ್ಕದ್ದು.

3. **ಅರ್ಜಿ ಶುಲ್ಕ :**

❖ ಕಿರಿಯ ಅಧಿಕಾರಿ/ಅಭಿವೃದ್ಧಿ ಅಧಿಕಾರಿ/ಡಿಸೈನರ್ ಹುದ್ದೆಗಳಿಗೆ ಅರ್ಜಿ ಶುಲ್ಕ – ರೂ.500/–

❖ ಸ್ಟೆನೋಗ್ರಾಫರ್/ಕಿರಿಯ ಸಹಾಯಕ ಹುದ್ದೆಗಳಿಗೆ ಅರ್ಜಿ ಶುಲ್ಕ – ರೂ.300/–

❖ ವಾಹನ ಚಾಲಕ/ಉಪಸಿಬ್ಬಂದಿ ಹುದ್ದೆಗಳಿಗೆ ಅರ್ಜಿ ಶುಲ್ಕ – ರೂ.200/–

4. **ಅರ್ಜಿ ಶುಲ್ಕ ಪಾವತಿ ವಿಧಾನ :**

ತಾವು ಸಲ್ಲಿಸುತ್ತಿರುವ ಹುದ್ದೆಗೆ ಸಂಬಂಧಿಸಿದ ಅರ್ಜಿ ಶುಲ್ಕವನ್ನು **'ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., (Karnataka State Souharda Fedaral Cooparative Ltd.,)** ಈ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ. (ಡಿಮ್ಯಾಂಡ್ ಡ್ರಾಫ್ಟ್) ತೆಗೆಯಬೇಕು.

ಡಿ.ಡಿ.ಯ ಹಿಂಭಾಗದಲ್ಲಿ ಹೆಸರು, ಅರ್ಜಿ ಸಲ್ಲಿಸಿರುವ ಹುದ್ದೆ, ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯ. ಆಯಾ ಹುದ್ದೆಗೆ ನಿಗದಿಪಡಿಸಿದ ಮೊತ್ತದ ಡಿಡಿಯನ್ನು ಲಗತ್ತಿಸಿಲ್ಲದ ಅರ್ಜಿಯನ್ನು ಅಥವಾ ನಿಗದಿತ ಸಮಯದ ನಂತರ ತಲುಪಿದ ಅರ್ಜಿಯನ್ನು ಅಥವಾ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಶುಲ್ಕವನ್ನು ಡಿ.ಡಿ. ರೂಪದಲ್ಲಿ ಮಾತ್ರ ಸ್ವೀಕರಿಸಲಾಗುವುದು.

5. ಡಿ.ಡಿ. ಲಗತ್ತಿಸಿದ ಅರ್ಜಿಯನ್ನು **ದಿನಾಂಕ 10.10.2014ರ ಸಂಜೆ 5:00** ಘಂಟೆಯ ಒಳಗಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಕೇಂದ್ರ ಕಛೇರಿಗೆ ಕಳುಹಿಸತಕ್ಕದ್ದು.

6. ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವವರು ಆಯಾ ಹುದ್ದೆಯ ಶುಲ್ಕದ ಡಿ.ಡಿ.ಯೊಂದಿಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು. ಪ್ರತಿ ಅರ್ಜಿಯನ್ನು ಪ್ರತ್ಯೇಕವಾದ ಲಕೋಟೆಯಲ್ಲಿ ಸಂಯುಕ್ತ ಸಹಕಾರಿಗೆ ಕಳುಹಿಸತಕ್ಕದ್ದು. ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುತ್ತಿದೆಯೆಂಬುದನ್ನು ಲಕೋಟೆಯ ಮೇಲೆ ಸ್ಪಷ್ಟವಾಗಿ ದಪ್ಪ ಅಕ್ಷರದಲ್ಲಿ ಬರೆದಿರಬೇಕು.

7. ಅರ್ಜಿ ಸಲ್ಲಿಸುವವರು ಕ್ರಮಬದ್ಧವಾದ ಇ–ಮೈಲ್ ಐ.ಡಿ ಮತ್ತು ಮೊಬೈಲ್ ಸಂಖ್ಯೆಯನ್ನು ಹೊಂದಿರತಕ್ಕದ್ದು. ಅರ್ಜಿಯನ್ನು ಸಲ್ಲಿಸಿದ ನಂತರ ಮುಂದಿನ ಎಲ್ಲಾ ಸೂಚನೆಗಳನ್ನು ಇಮೇಲ್ ಮತ್ತು ಎಸ್.ಎಂ.ಎಸ್‌ಗಳ ಮೂಲಕ ತಿಳಿಸಲಾಗುವುದು.

8. ಎಲ್ಲಾ ಹುದ್ದೆಗಳಿಗೂ ಕನ್ನಡದಲ್ಲಿ ಓದಲು, ಬರೆಯಲು ಮತ್ತು ಮಾತನಾಡಲು ತಿಳಿದಿರುವುದು ಕಡ್ಡಾಯ.

## ಆ) ಅರ್ಜಿಯ ಜೊತೆ ಸಲ್ಲಿಸಬೇಕಾದ ದಾಖಲಾತಿಗಳು :

1 ಹುದ್ದೆಗೆ ನಿಗದಿಪಡಿಸಿದ ಅರ್ಜಿ ಶುಲ್ಕದ ಡಿ.ಡಿ.

2. ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯನ್ನು ರುಜುವಾತುಪಡಿಸುವ ದಾಖಲಾತಿಗಳು.

(ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅಂಕಪಟ್ಟಿಗಳು ಹಾಗೂ ಘಟಿಕೋತ್ಸವದ ಪ್ರಮಾಣ ಪತ್ರಗಳ ಸ್ವಯಂ ದೃಢೀಕರಿಸಿದ ಪ್ರತಿಗಳನ್ನು ಲಗತ್ತಿಸಬೇಕು.)

3 ಸೇವೆಯಲ್ಲಿರುವ ಅಭ್ಯರ್ಥಿಗಳಿಂದ ತಾವು ಸೇವೆ ಸಲ್ಲಿಸುತ್ತಿರುವ ಪ್ರಾಧಿಕಾರ/ಸಂಸ್ಥೆಯಿಂದ ಅರ್ಜಿ ಸಲ್ಲಿಕೆಗೆ ಅನುಮತಿ ಪತ್ರ. (ಮಾದರಿ ನೀಡಲಾಗಿದೆ)

4 ಕಂಪ್ಯೂಟರ್ ಜ್ಞಾನವನ್ನು ಹೊಂದಿರುವ ಕುರಿತು ಸ್ವಯಂ ದೃಢೀಕರಿಸಿದ ದಾಖಲಾತಿ.

5. ಶೀಘ್ರಲಿಪಿಕಾರ (ಸ್ಟೆನೋಗ್ರಾಫರ್)/ಡಿಸೈನರ್ ಹುದ್ದೆಗೆ ಸಂಬಂದಿಸಿದಂತೆ ಪರಿಣಿತಿ ಪಡೆದಿರುವ ದಾಖಲಾತಿಗಳು.

ಇ) ಆಯ್ಕೆ ವಿಧಾನ ಹಾಗೂ ಸೇವಾ ಷರತ್ತುಗಳು :

1. ಆಯ್ಕೆಯನ್ನು ಲಿಖಿತ ಪರಿಕ್ಷೆ ಮತ್ತು ಸಂದರ್ಶನದ ಮೂಲಕ ಮಾಡಲಾಗುತ್ತದೆ.
2. ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೆಲೆ ಹುದ್ದೆಗಳಿಗನುಸಾರವಾಗಿ ನಿರ್ದಿಷ್ಠ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸಲಾಗುವುದು.
3. ಲಿಖಿತ ಪರೀಕ್ಷೆಯ ವಿಷಯ, ಪಠ್ಯಕ್ರಮ, ದಿನಾಂಕ, ಸಮಯ, ನೇಮಕಾತಿ ಅನುಪಾತ ಮುಂತಾದ ವಿವರಗಳನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coopದಲ್ಲಿ ದಿನಾಂಕ:30.09.2014ರಂದು ಪ್ರಕಟಿಸಲಾಗುವುದು.
4. ಲಿಖಿತ ಪರೀಕ್ಷೆ/ಸಂದರ್ಶನ/ಕೌಶಲ್ಯ ಪರೀಕ್ಷೆಗೆ ಕರೆಯಲ್ಪಟ್ಟ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಹಾಜರಾಗಬೇಕು. ಯಾವುದೇ ಪ್ರಯಾಣ ಭತ್ಯೆ/ದಿನ ಭತ್ಯೆಗಳನ್ನು ನೀಡಲಾಗುವುದಿಲ್ಲ.
5. ಸಂಯುಕ್ತ ಸಹಕಾರಿಯ ಸೇವೆಗೆ ಆಯ್ಕೆಯಾದ ಅಭ್ಯರ್ಥಿಯು ಎರಡು ವರ್ಷಗಳ ಕಾಲ ಪರೀಕ್ಷಾರ್ಥ ಸೇವಾ ಅವಧಿಯನ್ನು ಹೊಂದಿರುತ್ತಾರೆ. ತೃಪ್ತಿದಾಯಕ ಸೇವಾ ಅವಧಿಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಯ ಸೇವೆಯನ್ನು ಕ.ರಾ.ಸೌ.ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ನಿರ್ಣಯಕ್ಕೆ ಒಳಪಟ್ಟು ಖಾಯಮಾತಿ ಗೊಳಿಸಲಾಗುತ್ತದೆ.
6. ಪರೀಕ್ಷಾರ್ಥ ಅವಧಿಯಲ್ಲಿ ಮಾಸಿಕ ಕ್ರೋಢೀಕೃತ ವೇತನ ಈ ಕೆಳಗಿನಂತಿರುತ್ತದೆ.
   - ❖ ಕಿರಿಯ ಅಧಿಕಾರಿ/ಅಭಿವೃದ್ಧಿ ಅಧಿಕಾರಿ/ಡಿಸೈನರ್ ಹುದ್ದೆಗಳಿಗೆ – ಮಾಸಿಕ ರೂ.13,000/–
   - ❖ ಸ್ಟೆನೋಗ್ರಾಫರ್/ಕಿರಿಯ ಸಹಾಯಕ/ವಾಹನ ಚಾಲಕ ಹುದ್ದೆಗಳಿಗೆ – ಮಾಸಿಕ ರೂ.10,000/–
   - ❖ ಉಪಸಿಬ್ಬಂದಿಗಳಿಗೆ – ಮಾಸಿಕ ರೂ.7,000/–
7. ಸೇವಾ ಖಾಯಮಾತಿಯ ನಂತರ ಆಯಾ ಹುದ್ದೆಗಳಿಗನುಗುಣವಾಗಿ ಈ ಕೆಳಗಿನಂತೆ ವೇತನ ಶ್ರೇಣಿಯನ್ನು ನೀಡಲಾಗುತ್ತದೆ.

   ಅ. ಕಿರಿಯ ಅಧಿಕಾರಿ/ಅಭಿವೃದ್ಧಿ ಅಧಿಕಾರಿ/ಡಿಸೈನರ್

   – 14550–350–15600–400–17200–450–19000–500–21000–600–24600–700–26700

   ಆ. ಶೀಘ್ರಲಿಪಿಕಾರ(ಸ್ಟೆನೋಗ್ರಾಫರ್) :

   – 11600–200–12000–250–13000–300–14200–350–15600–400–17200–450–19000–500–21000

   ಇ. ವಾಹನ ಚಾಲಕ:

   – 11000–200–12000–250–13000–300–14200–350–15600–400–17200

   ಈ. ಕಿರಿಯ ಸಹಾಯಕ:

   – 10,600–200–12000–250–13000–300–14200–350–15600–400–16400

   ಉ. ಉಪ ಸಿಬ್ಬಂದಿ:

   – 9600–200–12000–250–13000–300–14200–350–14550
8. ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ಮತ್ತು ನಗರ ಪರಿಹಾರ ಭತ್ಯೆಗಳು ಆಡಳಿತ ಮಂಡಲಿಯು ಕಾಲ ಕಾಲಕ್ಕೆ ನಿಗದಿಪಡಿಸಿದ ದರದಲ್ಲಿ ಇರುತ್ತವೆ.
9. ವಿದ್ಯಾರ್ಹತೆ ಹಾಗೂ ಅನುಭವಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಸಂದರ್ಶನದ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
10. ಆಯ್ಕೆಯಾದ ಅಭ್ಯರ್ಥಿಗಳು ಸಂಯುಕ್ತ ಸಹಕಾರಿಗೆ ರೂ.2,00,000/–ಗಳ ಇಂಡೆಮ್ನಿಟಿ ಬಾಂಡ್ ನೀಡಬೇಕು.
11. ನಿಗದಿಪಡಿಸಿರುವ ಹುದ್ದೆಗಳ ಸಂಖ್ಯೆಯನ್ನು ಮುನ್ಸೂಚನಾರಹಿತವಾಗಿ ಮರುನಿಗದಿಗೊಳಿಸಬಹುದಾಗಿರುತ್ತದೆ.
12. ಸಂಯುಕ್ತ ಸಹಕಾರಿಯು ಯಾವುದೇ ಅರ್ಜಿಯನ್ನು ಕಾರಣವನ್ನು ನೀಡದೆ ತಿರಸ್ಕರಿಸಬಹುದಾಗಿರುತ್ತದೆ.
13. ಸಂಯುಕ್ತ ಸಹಕಾರಿಯಲ್ಲಿ ಈಗಾಗಲೇ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಆದ್ಯತೆ ನೀಡಲಾಗುವುದು.
14. ಸಂಯುಕ್ತ ಸಹಕಾರಿಯು ಯಾವುದೇ ಹುದ್ದೆಗೆ ಸಂಬಂಧಿಸಿದಂತೆ ಪ್ರತ್ಯೇಕ ಸೇವಾ ಷರತ್ತುಗಳನ್ನು ವಿಧಿಸಬಹುದಾಗಿದೆ.
15. ಆಯ್ಕೆಯಾದ ಅಭ್ಯರ್ಥಿಗಳು ಸಂಯುಕ್ತ ಸಹಕಾರಿಯ ಸೇವಾ ನಿಯಮಗಳಿಗೆ ಒಳಪಟ್ಟಿರುತ್ತಾರೆ.
16. ನೇಮಕಾತಿಗೆ ಸಂಬಂಧಿಸಿದ ಇನ್ನಿತರ ಯಾವುದೇ ಮಾಹಿತಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೆಬ್‌ಸೈಟ್/ಕೇಂದ್ರ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.
17. ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಸಂದರ್ಭದಲ್ಲಿಯೂ ಯಾವುದೇ ಕಾರಣವನ್ನು ನೀಡದೆ ರದ್ದುಗೊಳಿಸುವ ಅಧಿಕಾರವನ್ನು ಸಂಯುಕ್ತ ಸಹಕಾರಿಯು ಹೊಂದಿರುತ್ತದೆ

18. ಈ ನೇಮಕಾತಿಗೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳಲ್ಲಿ ಸಂಯುಕ್ತ ಸಹಕಾರಿಯು ತೆಗೆದುಕೊಳ್ಳುವ ತೀರ್ಮಾನಗಳು ಅಂತಿಮವಾಗಿರುತ್ತವೆ ಮತ್ತು ಅವುಗಳಿಗೆ ಎಲ್ಲಾ ಅಭ್ಯರ್ಥಿಗಳು ಬದ್ಧರಾಗಿರತಕ್ಕದ್ದು.

**ಈ) ಅರ್ಹತಾ ಷರತ್ತುಗಳು:–**

1. ಭಾರತೀಯ ನಾಗರೀಕನಾಗಿರತಕ್ಕದ್ದು.
2. ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಕನಿಷ್ಠ 18 ವರ್ಷ ವಯಸ್ಸಿನವನಾಗಿರತಕ್ಕದ್ದು. ಕಿರಿಯ ಅಧಿಕಾರಿ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಗರಿಷ್ಠ ವಯೋಮಿತಿ 35 ವರ್ಷಗಳು ಹಾಗೂ ಉಳಿದ ಹುದ್ದೆಗಳಿಗೆ ಗರಿಷ್ಠ ವಯೋಮಿತಿ 30 ವರ್ಷಗಳು.
3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರತಕ್ಕದ್ದು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತನಾಗಿರತಕ್ಕದ್ದು.
4. ದೈಹಿಕವಾಗಿ ಅನರ್ಹರಾಗಿದ್ದಾನೆಂಬುದಾಗಿ ವೈದ್ಯಕೀಯ ಪರೀಕ್ಷೆಯಲ್ಲಿ ಕಂಡುಬಂದಲ್ಲಿ ತಿರಸ್ಕರಿಸುವ ಪೂರ್ಣ ವಿವೇಚನಾಧಿಕಾರವನ್ನು ಸಂಯುಕ್ತ ಸಹಕಾರಿಯು ಕಾದಿರಿಸಿಕೊಂಡಿದೆ.
5. ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ

**ಉ) ದುರ್ನಡತೆ :**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ/ ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು/ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಸಂದರ್ಶನದಿಂದ/ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕ
ಮತ್ತು ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ

**ಸೇವೆ ಸಲ್ಲಿಸುತ್ತಿರುವ ಪ್ರಾಧಿಕಾರ/ಸಂಸ್ಥೆಯಿಂದ ಅರ್ಜಿ ಸಲ್ಲಿಕೆಗೆ ಅನುಮತಿ ಪತ್ರ**

**ಇವರಿಗೆ :**

**ವ್ಯವಸ್ಥಾಪಕ ನಿರ್ದೇಶಕರು**

**ಮತ್ತು ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ**

ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

ಶ್ರೀ/ಶ್ರೀಮತಿ ________________________________ ರವರ ಕುರಿತಂತೆ ಈ ಕೆಳಗಿನಂತೆ ದೃಢೀಕರಿಸುತ್ತೇನೆ.

ಸದರಿಯವರು ನೇಮಕಾತಿ ನಿಯಮಗಳಡಿಯಲ್ಲಿ ನೇಮಕಗೊಂಡು __________ ರಿಂದ __________ಸಂಸ್ಥೆ/ಇಲಾಖೆಯಲ್ಲಿ ಪ್ರಸ್ತುತ ____________________ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ. ಅವರ ಕಾರ್ಯನಿರ್ವಹಣೆ ಮತ್ತು ನಡತೆಯು ಉತ್ತಮವಾಗಿದೆ.

ಅವರು ತಮ್ಮ ಸಂಸ್ಥೆಯ ____________________________ ಹುದ್ದೆಗೆ ಅರ್ಜಿ ಸಲ್ಲಿಸಲು ಈ ಮೂಲಕ ಅನುಮತಿ ನೀಡಲಾಗಿದೆ.

ಕಛೇರಿ ಮೊಹರು                ಸಹಿ ಮತ್ತು ಹುದ್ದೆ

ಸ್ಥಳ:

ದಿನಾಂಕ: